**ಸಾಕ್ಷಿಗೆ ದಿನಾಂಕ 29.10.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಆರ್ ಎಂ ಜಿ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ, ಮೆಡಿಕಲ್ ರೆಕಾರ್ಡ್ ಎಕ್ಸಿಕ್ಯೂಟಿವ್ ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 22 | ಅಧಿಕಾರ ಪತ್ರ |
| ನಿ.ಪಿ 23 | ಎಂ ಎಲ್ ಸಿ ಎಕ್ಸ್ ಟ್ರಾಕ್ಟ್ ನ ದೃಢೀಕೃತ ಪ್ರತಿ<br>(ಮೂಲ ದಾಖಲೆಯನ್ನು ತಾಳೆ ನೋಡಿ ಹಿಂತಿರುಗಿಸಲಾಯಿತು) |
| ನಿ.ಪಿ 24 | ಕೇಸ್ ಶೀಟ್ |

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ**

3. ಎಂ ಎಲ್ ಸಿ ರಿಜಿಸ್ಟರ್ ನಲ್ಲಿ ವ್ಯಾಲುಮ್ ನಂಬರಾಗಲೀ ಅಥವಾ ಎಂ ಎಲ್ ಸಿ ಯು ಪ್ರಾರಂಭದ ದಿನಾಂಕ ಮತ್ತು ಮುಕ್ತಾಯದ ದಿನಾಂಕ ಇಲ್ಲ ಎಂದರೆ ಸರಿ. ನಿಪಿ.23 ರಲ್ಲಿ ಹಿಂಬದಿ ಸವಾರ ಎಂದು ತಿದ್ದುಪಡಿ ಮಾಡಿ ನೀಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.23 ನ್ನು ಅರ್ಜಿದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಎಂ ಎಲ್ ಸಿ ಪ್ರಕರಣಗಳಲ್ಲಿ ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ ಎಂದರೆ ಸರಿ, ಅದರಂತೆ ಈ ಪ್ರಕರಣದಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಸದರಿ ಪೊಲೀಸ್ ಇಂಟಿಮೇಷನ್ ನ್ನು

ಹಾಜರುಪಡಿಸಿಲ್ಲ ಎಂದರೆ ಸರಿ. ಎಂ ಎಲ್ ಸಿ ರಿಜಿಸ್ಟರ್ ನಲ್ಲಿರುವ ಮಾಹಿತಿ ಮತ್ತು ಪೊಲೀಸ್ ಇಂಟಿಮೇಷನ್ ನಲ್ಲಿರುವ ಮಾಹಿತಿ ಒಂದೇ ಆಗಿರುತ್ತದೆ ಎಂದರೆ ಸರಿ. ಡಾ. ಪ್ರಿಯಾನಂದ ಎನ್ನುವವರು ನಿಪಿ.23 ಎಂ ಎಲ್ ಸಿ ಯನ್ನು ಬರೆದಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಂಟಿಮೇಷನ್ ನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

**ಈ ಹಂತದಲ್ಲಿ ಸಾಕ್ಷಿಯು ಪೊಲೀಸ್ ಇಂಟಿಮೇಷನ್ ನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದರ ಮೇರೆಗೆ 2 ನೇ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಲ್ಪಿಸಲಾಯಿತು.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**